ಮತ್ತು ದೀಪಾವಳಿಗೆ ಲೆಕ್ಕವಹಿಸುತ್ತಾನೆ. ಪಂಚರು ಊರಿನ ಮರ್ಯಾದೆ ಪ್ರಶ್ನೆ ಎಂದು ಅಂತಾ ಕುಟುಂಬದವರನ್ನು ಕರೆಸಿ ಬೀಜದ ಮನುಷ್ಯನನ್ನ ಉಡ್ಲಲ್ಲಿ ಹಾಕಿಕೊಂಡು ಮಕ್ಕಳನ್ನು ಮಾಡಿಕೊಳ್ಳಲು ಒತ್ತಡ ಹಾಕುತ್ತಾರೆ. ಪಂಚಾಯಿತಿ ಕಟ್ಟೆಯಲ್ಲಿ ಇವರೇ ಹಡಕರು ಅಂತ ಗುರುತಿಸಲು ಅವರ ತಲೆಯ ಸುಳಿಯ ಸುತ್ತ ಕೂದಲು ಬೋಳಿಸಿ ಸುಣ್ಣ ಮೆತ್ತುತ್ತಾರೆ. ಆಮೇಲೆ ಒಂದು ವೇಳೆ ಮಕ್ಕಳಾದಲ್ಲಿ ಆ ಸುಣ್ಣತೊಳೆದು ಹಾಕಿ ಹಡಕರ ಪಟ್ಟಿಯಲ್ಲಿ ಕೆಂಪು ಮಸಿಯಿಂದ ರೌಂಡು ಹಾಕುತ್ತಾರೆ. ನಾನು ಊರಿನ ಕತೆ ಹೇಳಿದ ಮೇಲೆ ನನ್ನ ಕತೆ ಏನಾಯ್ತು ಅಂತ ಮುಂದ ಹೇಳ್ತೀನಿ.

* * *

ಗೋಡೆಗೆ ನೇತು ಹಾಕಿದ ಸುಮಾರು ವರ್ಷದ ಹಿಂದಿನ ಅಪ್ಪನ ಹಳೆಫೋಟೊ ನೋಡಿ, 'ಯಪಾ, ಯಾಕ ನಿನ್ನ ಊರಿನವರು ಸನ್ಮಾನ ಮಾಡ್ಯಾರ' ಅಂತ ಕೇಳಿದೆ. ಅದಕ್ಕಾತ 'ಊರಿನಲ್ಲಿ ಕರೆಷ್ಟು ಹತ್ತು ತಿಂಗಳೊಳಗೆ ತಂದೆಯಾದವರಿಗೆ ಪತ್ತೆಹಚ್ಚಿ ಸನ್ಮಾನ ಮಾಡ್ತಾರ' ಅಂದ. ನಮ್ಮಪ್ಪ ಅದೇ ಫೋಟೊ ನೋಡಿ ನೋಡಿ ವಲ್ಲಿ ತಗಂಡು ವರೆಸಿ, ಮತ್ತದೇ ಡೊಂಕು ಮಳೆಗೆ ನೇತು ಹಾಕುತಿದ್ದ. ಆ ಫೋಟೊ ನೋಡುತ್ತಾ ನೋಡುತ್ತಾ ಅದರಲ್ಲಿ ಮುಳುಗಿ ಹೋಗಿ, ನಾವು ಮಾತಾಡಿಸಿದರ ಕೂಡ ಏನೇನೋ ಉತ್ತರ ಕೊಟ್ಟು ಜಾರಿಕೊಂಡುಬಿಡುತ್ತಿದ್ದ. ಹಡಕರ ಆದ್ರ ಅವಮಾನ ಮಾಡಿಸಿಕೊಳ್ಳೋ ಊರಲ್ಲಿ ಬಹುಬೇಗ ಒಂದಾದ ನಂತರ ಒಂದು ಮಕ್ಕಳ ಮಾಡಿ ಹಡಕರ ಪಟ್ಟಿಯಿಂದ ತಪ್ಪಿಸಿಕೊಂಡಿದ್ದಲ್ಲದೇ ಸನ್ಮಾನಿತನಾಗಿದ್ದ.

ನಾನು ಮಲ್ಲಿಕಾರ್ಜುನ, ನಮ್ಮಣ್ಣ ಸಾಬಣ್ಣ. ನನ್ನ ಎರಡು ಹಲ್ಲುಗಳು ಕೆಳಗಿನ ತುಟಿದಾಟಿ ಎಷ್ಟುದೂರ ಬಂದಿವೆಯೆಂದರೆ, ಕತ್ತಲಲ್ಲಿ ನಮ್ಮೋಣಿಯವ ಒಂದು ಸಾರಿ ಡಿಕಾಯಿದು ನನ್ನ ಹಲ್ಲುಗಳು ಅವನ ಮುಖಕ್ಕೆ ನೆಟ್ಟು ಅವನ ನೆತ್ತರು ನನ್ನ ಹಲ್ಲಿನ ಮೇಲೆ ಕುಂತಾಗ, ಅವತ್ತೇ ಅನಕೊಂಡೆ – ಇವು ಹಲ್ಲುಗಳಲ್ಲ ಚಾಕುಗಳು ಅಂತ. ನಾನು ಒಂದಿಷ್ಟು ವರ್ಷ ಸಾಲಿ ಕಲತೆ. ಸಾಲಿಯಲ್ಲಿ ನನ್ನ ಕಪ್ಪು ಬಣ್ಣ, ತುಟಿ ಮೇಲೆ ಮಲಗಿದ ಎರಡಲ್ಲು ನೋಡಿ ಹುಡುಗರು ತಮ್ಮ ಕುತೂಹಲ ಮತ್ತು ಆಶ್ಚರ್ಯ ತುಂಬಿದ ಕಣ್ಣುಗಳಿಂದ ನೋಡುತ್ತಾ ಕುಳಿತುಬಿಡುತ್ತಿದ್ದರು. ಒಂದುಡ್ಗಿ ಮುಂಜಾನೆ ಸಾಲಿಗೆ ಬಂದು ತಕ್ಷಣ ತನ್ನೆಸರನ್ನ ನನ್ನ ಅಂಗಿಯ ತುದಿಗೆ ತಪ್ಪದೇ ಬರೆಯುತ್ತಿದ್ದಳು. ಅವಳನ್ನ ಮಾಟ ಮಾಡಿಸಿ ಅವರ ಚಿಕ್ಕಪ್ಪ ಕೊಲ್ಲುವವರೆಗೂ ಒಂದು ವರ್ಷ ತಪ್ಪದೇ ಬರೆದಳು. ನಾನು ಅವಳ ನೆನಪಿಗೋಸ್ಕರ ನನ್ನಂಗಿಗೆ ರಂಗಮ್ಮ ಅಂತ ಒಂದು ವರ್ಷ ಬರೆದುಕೊಂಡು ಅವಳ ಋಣ ತೀರಿಸಿದೆ. ರಂಗಮ್ಮ ಅಂತ ಹೆಸರಿಡಿದು ಯಾರಿಗೂ ಗೊತ್ತಾಗದೇ ಮೂಲೆಯಲ್ಲಿ ನಿಂತು ಸಾಕಷ್ಟು ಸಾರಿ ಅತ್ತಿದ್ದೇನೆ. ನಮ್ಮೂರ ಸಾಲಿ ಮುಗಿಸಿ ಪಕ್ಕದೂರಿಗೆ ಹೋಗಿ ಏಳು ಮುಗಿಸಿದರೆ ಸಾಕಾಗಿತ್ತು. ಊರಲ್ಲೇ ಸಾಲಿ ಬಿಟ್ಟವರೆಲ್ಲಾ ನಾನು ಸಾಲಿಗೋಗೋದು ನೋಡಿ ಹಂಗಿಸುತ್ತಿದ್ದರು. ನಮ್ಮಪ್ಪ 'ಸಾಲಿ ಸಾಕು, ನಿಮ್ಮಣ್ಣನ ಜೊತೆ ದುಡಿಯಲು ಹೋಗು' ಎಂದು ಸಾಲಿ ಬಿಡಿಸಿ ಕೂಲಿ ಹಚ್ಚಿಸಿದ.

* * *

ಹತ್ತು ವರ್ಷದ ನಂತರ ಈಗ ಮನೆಯಲ್ಲಿ ಸಾಕಷ್ಟು ಬದಲಾವಣೆಯಾಗಿತ್ತು. ಆತಂಕದ ವಾತಾವರಣ. ಅಪ್ಪ-ಅಮ್ಮ, ಅಣ್ಣ, ತೊಡೆಯ ಮೇಲೆ ಕೂಸನ್ನ ಮಲಗಿಸಿಕೊಂಡ ಅಣ್ಣನ ಹೆಂಡತಿ, ನನ್ನನ್ನ ಮತ್ತು ನನ್ನ ಹೆಂಡತಿ ಪಾರ್ವತಿಯನ್ನ ಏನೋ ಅಪರಾಧ ಮಾಡಿವೇನೋ ಎಂಬ ಭಾವದಿಂದ ದುರುಗುಟ್ಟಿ ನೋಡುತ್ತಿದ್ದರು. ಮೂಲೆಯಲ್ಲಿ ಏನೇನೋ ಗೊಣಗುತ್ತಿದ್ದರು. ಅವರು ನೋಡುವ ನೋಟದಿಂದಾಗಿ ನಾನು ಪಾರ್ವತಿ, ಊರುಬಿಟ್ಟು ಯಕ್ಕಾಡೆದ್ರೂ ಹೋಗಿಬಿಡಮೇನಂತ ಅನಿಸ್ತು. ಅಪ್ಪಾ 'ನಾವೆಲ್ಲಾ ಹಿಂದಕ್ಕ ನೋಡು' ಅಂತ ಗೋಡೆಯ ಮೇಲೆ ತನ್ನ ಫೋಟೊ ತೋರಿಸಿ ತನ್ನ ಕ್ವಾರಿ ಮೀಸೆ ಸವರಿದ. ನಮ್ಮಣ್ಣ ಕಣ್ಣಗಲಿಸಿ ನೋಡಿದ. ಏನಾರ ಅನಂಗಿದ್ರ ಅಂದು ಬಿಡ್ಲಿ, ಇವರ್‍ಯಾಕ ಅಷ್ಟು ಹರಕೊಂಡು ತಿನ್ನೋರಂಗ ನೋಡ್ತಾರ. ನಾವು ದೂರ ಕುಂತದಕ ಅವರ ಮಾತನ್ನ ಗೋಣು ಅಲ್ಲಾಡಸಲಾರಂಗ ಕೇಳತಿದ್ವಿ, ನಾವು ಅಪರಾಧಿಗಳಾಗಿದ್ದಾಗ ಇನ್ನೊಬ್ಬರ ಹೇಳೋ ಮಾತು ಬಹಳ ನೆನಪಿನಲ್ಲಿ ಉಳಕೊಂಡು ಇಟಿಟಿಟಕ ಚುಚ್ಚುತಿರತಾವ, ಅಂಬೋದಕ ನಮ್ಮ ಮನ್ಯಾಗಳೋರಾಡೊ ಒಂದೊಂದು ಮಾತು ಸಾಕ್ಷಿ.

ನಮ್ಮಣ್ಣನ ಕಣ್ಣುಗಳು ಕಾರದಪುಡಿ ಏನಾರ ತುಂಬಿಕೊಂಡಾನೇನೊ ಅನ್ನುವಷ್ಟು ಕೆಂಪಗಾಗಿದ್ದವು. ತಾಯಿ ಬಂಡೆ ಗೀರಿಕೋಂತ 'ಮಲ್ಲಿಗೆ ಇನ್ನ ರವಷ್ಟು